ಅದರಲ್ಲಿ 3.95 ಉಪಯೋಗಿಸಬಹುದು ಅಂತ. ಕಳೆದ ವರ್ಷ ಕೇವಲ ಅದು 1.90 ಇತ್ತು. ಈ ಸಾರಿ 3.95 ಇದೆ. ಅದರಿಂದಾಗಿ ಅಲ್ಲಿ ಎರಡರಷ್ಟು ನೀರು ಇದೆ. ಇನ್ನು ಎರಡನೆಯದಾಗಿ ಹೇಳುವುದಾದರೆ ಅವರಿಗೆ ಏನು ನೀರು ಬಿಡುತ್ತೇವೆ ಎನ್ನುವ ಆತಂಕವಿದೆ. ಈ ತರಹವಾಗಿ ನೀರನ್ನು ಬಿಡುವುದಿಲ್ಲ. ನೀರನ್ನು ಬಿಡುವುದು ಇದ್ದರೂ ಕೂಡ stop logನ್ನು ಫಾಕಿ ನೀರನ್ನು ಉಳಿಸಿಕೊಂಡೇ ಕೆಲಸವನ್ನು ಮಾಡುತ್ತೇವೆಯೇ ಹೊರತು ನಾವು ಯತೇಚ್ಚವಾಗಿ ಯಾವುದೇ stop log ಇಲ್ಲದೆ ನೀರನ್ನು ಬಿಡುವುದಿಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಇನ್ನು ಕೊಯ್ನಾದಿಂದ ನೀರನ್ನು ಏನು ನೀವು permanent basisನಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ, ಅಲ್ಲಿ ಮಹಾರಾಷ್ಟ್ರ ಸರ್ಕಾರದವರು co-operate ಮಾಡುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅದು ಸತ್ಯಕ್ಕೆ ದೂರವಾದುದು. ನಾವು ಯಾವಾಗ ಮಹಾರಾಷ್ಟ್ರ ಸರ್ಕಾರದಿಂದ ನೀರನ್ನು ಕೇಳಿದ್ದೇವೆ, ನಮಗೆ ಅವರು ಬೇಸಿಗೆ ಕಾಲದಲ್ಲಿ ನೀರನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ 2006ರಲ್ಲಿ 2 ಟಿಎಂಸಿ ನೀರನ್ನು ಕೊಟ್ಟಿದ್ದಾರೆ. 2001ರಿಂದ 2006ರವರೆಗೆ ಅವರು ನಮಗೆ ನೀರನ್ನು ಕೊಟ್ಟಿದ್ದಾರೆ. 1993ರಿಂದಲೂ ಸಹ ಅವರು ನಮಗೆ ನೀರನ್ನು ಕೊಟ್ಟಿದ್ದಾರೆ. ಈಗಾಗಲೇ 24 ಕೋಟಿ ರೂಪಾಯಿಗಳು ಖರ್ಚಾಗಿದೆ. ಇದನ್ನು ದುಡ್ಡು ಕೊಟ್ಟು ತರುವಂತಹ ಒಂದು ನೀರು ಇದೆ. ಇದಕ್ಕೆ ಸಂದರ್ಭ ಒದಗಿ ಬಂದರೆ ಖಂಡಿತವಾಗಿ ಆ ಬಗ್ಗೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ. ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಸಂದರ್ಭ ಬಂದರೆ ಕೊಯ್ನಾದಿಂದ ನೀರನ್ನು ತಂದು ಜಮಖಂಡಿ ಭಾಗಕ್ಕೆ ನೀರನ್ನು ಒದಗಿಸಿಕೊಡುತ್ತೇವೆ. ಅದೇ ರೀತಿಯಾಗಿ ಬಿಜಾಪುರ ಭಾಗಕ್ಕೂ ಕೂಡ ನಮ್ಮ ಆಲಮಟ್ಟಿ ಮತ್ತು ನಾರಾಯಣಪುರದಿಂದ ಕೆನಾಲ್‌ಗಳ ಮೂಲಕ ನೀರನ್ನು ಹಿಂದೆಯೂ ಬಿಟ್ಟಿದ್ದೇವೆ. ಈ ವರ್ಷ ಅವಶ್ಯಕತೆ ಬಿದ್ದರೆ ನೀರನ್ನು ಒದಗಿಸುತ್ತೇವೆ. ಯಾವುದೇ ಕಾರಣಕ್ಕೆ ಜಮಖಂಡಿ ಆಗಿರಬಹುದು, ವಿಜಾಪುರದ ಯಾವುದೇ ಭಾಗವಾಗಿರಬಹುದು. ಅದು ತೇರದಾಳ ಇರಬಹುದು, ಯಾವುದೇ ಭಾಗಕ್ಕೂ ಕೂಡ ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆನ್ನುವಂತಹ ಮಾತನ್ನು ಹೇಳುವುದಕ್ಕೆ ನಾನು ಇಚ್ಚೆಪಡುತ್ತೇನೆ.

ಅಧ್ಯಕ್ಷರು: ಮಾನ್ಯ ಡಿ.ಕೆ.ಶಿವಕುಮಾರ್‌ರವರ ಪರವಾಗಿ ಮಾನ್ಯ ಟಿ.ಬಿ.ಜಯಚಂದ್ರರವರು ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತಾರೆ.

(ಇ) ವಿಷಯ: ರಾಮನಗರ ಜಿಲ್ಲೆ ಕನಕಪುರ ಪೇಟೆಯಲ್ಲಿ ಹಾದು ಹೋಗುವ ಕನಕಪುರ ಎಂ.ಜಿ.ರಸ್ತೆಯನ್ನು ಅಗಲಗೊಳಿಸಿ ಮೂಲಭೂತ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಲೋ-೧೦೫೩-೪೦

ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):– ರಾಮನಗರ ಜಿಲ್ಲೆ ಕನಕಪುರ ಪೇಟೆಯಲ್ಲಿ ಹಾದು ಹೋಗುವ ಕನಕಪುರ–ಎಂ.ಜಿ.ರಸ್ತೆಯು ರಾಷ್ಟ್ರೀಯ ಹೆದ್ದಾರಿ ರಸ್ತೆ – 209 ಬೆಂಗಳೂರು – ದಿಂಡುಗಲ್ ರಸ್ತೆಯ ಭಾಗವಾಗಿದ್ದು 2.70 ಕಿ.ಮೀ ಉದ್ದವಿರುತ್ತದೆ (ಸಂಪಳಿ 420.90 ರಿಂದ 423.60 ಕಿ.ಮೀ ವರೆಗೆ).

ಕನಕಪುರ ನಗರ ವ್ಯಾಪ್ತಿಯ 2.70 ಕಿ.ಮೀ ಉದ್ದದ ರಸ್ತೆಯನ್ನು ನಾಲ್ಕು ಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ರೂ. 15.77 ಕೋಟಿಗಳಿಗೆ 2008–09ನೇ ಸಾಲಿನ ಎನ್.ಹೆಚ್.ಓ ಯೋಜನೆಯಲ್ಲಿ ದಿನಾಂಕ: 22.12.2008ರಲ್ಲಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಅಂದಾಜನ್ನು ಕೇಂದ್ರ ಸರ್ಕಾರವು ಪರಿಷ್ಕೃತ ಹೆಚ್ಚುವರಿ ಯೋಜನೆಯಲ್ಲಿ ಸೇರಿಸಿದ್ದು ಅಂದಾಜು ಪತ್ರಿಕೆಗೆ ಮಂಜೂರಾತಿ ನಿರೀಕ್ಷಿಸಲಾಗಿದೆ.

ಈ ರಸ್ತೆಯ ಅಗಲೀಕರಣಕ್ಕೆ ಅವಶ್ಯವಾದ ಭೂಸ್ವಾಧೀನ ಹಾಗೂ ಕಟ್ಟಡಗಳ ಸ್ವಾಧೀನಕ್ಕೆ ರೂ. 14.60 ಕೋಟಿಗಳ ಅಂದಾಜಿಸಿದ್ದು ಈ ಬಗ್ಗೆ ಕಟ್ಟಡಗಳ ಮೌಲ್ಯಮಾಪನ ಅಂದಾಜು ರೂ. 3.58 ಕೋಟಿಗಳಾಗಿರುತ್ತದೆ. ಈ ಮಧ್ಯೆ ಸ್ವಾಧೀನ ಪರಿಹಾರವಾಗಿ ರೂ. 3.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಸಂಬಂಧಿಸಿದ ಅಧಿಕಾರಿಗಳಿಗೆ ನಿಯಮಾನುಸಾರ ಸ್ವಾಧೀನ ಪರಿಹಾರ ಪಾವತಿ ಮಾಡಲು ಸೂಚನೆ ನೀಡಲಾಗಿದೆ. ಈಗಾಗಲೇ ಕನಿಷ್ಠ ಮೂಲಭೂತ ಸೌಲಭ್ಯ ನೀಡುವ ಸಲುವಾಗಿ ರಸ್ತೆಯ ಕಾಮಗಾರಿ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕನಕಪುರ ಪುರಸಭೆಯು ಟೆಂಡರ್ ಆಹ್ವಾನಿಸಿರುವುದಾಗಿ ತಿಳಿದು ಬಂದಿರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) (ಮಾನ್ಯ ಡಿ.ಕೆ.ಶಿವಕುಮಾರ್‌ರವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಕನಕಪುರ ಪಟ್ಟಣದಲ್ಲಿ ರಸ್ತೆಯನ್ನು ಈಗಾಗಲೇ ಅಗಲೀಕರಣವನ್ನು ಮಾಡಿರುತ್ತಾರೆ. ಅಲ್ಲಿ ಅಗಲೀಕರಣವನ್ನು ಮಾಡಿರುವುದರಿಂದಾಗಿ ಅನೇಕ ಜನರು ಅಲ್ಲಿ ಭೂಮಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪರ್ಯಾಯವಾಗಿ ಭೂಮಿಯನ್ನು ಕೊಡುವ ಬಗ್ಗೆ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಅವಕಾಶವಿದೆ. ಸರ್ವೆನಂ:305ರಲ್ಲಿ ಈಗಾಗಲೇ 4 ಎಕರೆ ಜಮೀನು ಇದೆ. ಅದು ಒಳ್ಳೆಯ ಜಾಗದಲ್ಲಿದೆ, ಅದು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತಿದೆ. ಬಹುಶಃ ಅಲ್ಲಿ ಭೂಮಿಯನ್ನು ಕಳೆದುಕೊಂಡಿರುವಂತಹವರನ್ನು ಗುರುತಿಸಿ ಪರ್ಯಾಯವಾಗಿ ಅವರಿಗೆ ಅದನ್ನು ಕೊಡುವಂತಹದನ್ನು ಮಾಡಿದರೆ ಬಹುಶಃ ಅವರು compensationನ್ನು ಕೇಳುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ ಇದು ಒಂದು ಮುಖ್ಯವಾಗಿರುವಂತಹ ವಿಚಾರವಾಗಿದೆ. ಇದರ ಬಗ್ಗೆ ಸರ್ಕಾರವು ಗಮನವನ್ನು ಹರಿಸಬೇಕಾಗಿದೆ. ಇನ್ನೊಂದು ವಿಚಾರವೆಂದರೆ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ

ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿರುವುದು ಅದು ಈ ವರ್ಷಕ್ಕೆ. ಮಾರ್ಚಿ ತಿಂಗಳು ಮುಗಿಯುವಂತಹ ಸಂದರ್ಭದಲ್ಲಿ ಅದು ಮಂಜೂರಾತಿ ಆಗುತ್ತದೆಯೇ? ಆ ರೀತಿಯಾಗಿ ತಾವು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತರುತ್ತೀರಾ ಎಂಬ ಪ್ರಶ್ನೆ. ಇನ್ನೊಂದು ಬಹಳ ಮುಖ್ಯವಾಗಿ ಹೇಳುವುದಾದರೆ ಇದು ಎಂಎಂಎಲ್‌ಗೆ ಸಂಬಂಧಿಸಿದಂತಹ ರಸ್ತೆಯಾಗಿದೆ. ಅವರು ಬಹಳಷ್ಟು ಎಂಎಂಎಲ್ ಕಾರ್ಯವ್ಯಾಪ್ತಿ ಬರುವಂತಹ ರಸ್ತೆಯನ್ನು ಉಪಯೋಗಿಸಿ ಹಾಳುಮಾಡಿರುವಂತಹ ಸಂದರ್ಭದಲ್ಲಿ ಅವರ ಹತ್ತಿರ ಸಾಕಷ್ಟು ಹಣವಿದೆ. ಈಗಾಗಲೇ ಆ ಭಾಗದ ಶಾಸಕರು ಕೂಡ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರದ ಮುಖೇನ ಮುಖ್ಯಮಂತ್ರಿಯವರ ಗಮನವನ್ನು ಸೆಳೆದು ಸುಮಾರು 10 ಕೋಟಿ ರೂಪಾಯಿಗಳನ್ನು ರಸ್ತೆ ಅಗಲೀಕರಣದ ಬಗ್ಗೆ ಮೂಲಭೂತ ಸೌಕರ್ಯವನ್ನು ಮಾಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಅದರ ಮೇಲೆ ತಾವು ಒತ್ತಾಯವನ್ನು ತರುವಂತಹ ಕೆಲಸವನ್ನು ಮಾಡುತ್ತೀರಾ? ಈಗಾಗಲೇ ತಾವು ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಚರಂಡಿ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ತಾವು ಸೂಚನೆಯನ್ನು ಕೊಟ್ಟಿದ್ದೀರೆಂದು ಹೇಳುತ್ತೀರಿ. ನೀವು 3 ಕೋಟಿ ರೂಪಾಯಿಗಳನ್ನು ಕೆಆರ್‌ಡಿಸಿಎಲ್‌ಗೆ ಕೊಟ್ಟಿದ್ದೀರಿ. ಆದರೆ ಅವರು ಇದುವರೆಗೂ ಯಾವುದೇ ಹಣವು ಬಂದಿಲ್ಲವೆಂಬ ಮಾತನ್ನು ಪದೇಪದೇ ಹೇಳುತ್ತಿದ್ದಾರೆ. ತಾವು ಕೊಟ್ಟಿರುವ ಸೂಚನೆಯೂ ಇದೆ. ಆದೇಶವೂ ಕೂಡ ಇದೆ. ಇವತ್ತು ಕೆಆರ್‌ಡಿಸಿಎಲ್‌ನಲ್ಲಿ action ಆಗಬೇಕಾಗಿದೆಯೇ ವಿನಃ ಮುನಿಸಿಪಾಲಿಟಿಯ ಪ್ರಶ್ನೆ ಬರುವುದಿಲ್ಲ. ಮುನಿಸಿಪಾಲಿಟಿಯಲ್ಲಿ ಆಗಿರುವಂತಹದ್ದು ಬೇರೆ ರಸ್ತೆಗೆ. ದಯಮಾಡಿ ಅಲ್ಲಿ duplication ಆಗಿದೆ. ಅದನ್ನು ತಾವು ಗಮನಿಸಿ. ಕೆಆರ್‌ಡಿಸಿಎಲ್ ಮುಖೇನ ನೀವು 3 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತೀರಿ. ಅವರು ಮೂಲಭೂತವಾಗಿ ಚರಂಡಿ ಕೆಲಸವನ್ನು ಪ್ರಾರಂಭ ಮಾಡಿದರೆ ಅದು ಸರಿಯಾಗುತ್ತದೆ. ಅವರು ಬಿಟ್ಟು ಬೇರೆಯವರು ಮಾಡಿದರೆ ಅದು ಸರಿಯಾಗುವುದಿಲ್ಲ. ದಯಮಾಡಿ ತಾವು duplication ಆಗುವುದಕ್ಕೆ ಅವಕಾಶವನ್ನು ತಾವು ಕೊಡಬಾರದು. ಇವೆಲ್ಲವನ್ನು ಸರ್ಕಾರವು ಗಮನದಲ್ಲಿಟ್ಟುಕೊಂಡು ಸಮಗ್ರವಾದಂತಹ ಚಿಂತನೆಯನ್ನು ಮಾಡಿ ಉತ್ತರವನ್ನು ತಾವು ಕೊಡಬೇಕು.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಭೂಸ್ವಾಧೀನ ಪ್ರಕರಣದಲ್ಲಿ ಪ್ರತ್ಯೇಕವಾದ 4 ಎಕರೆ ಜಮೀನು ಇದೆ. ಅದನ್ನು ಕೊಡುವುದಕ್ಕೆ ಸಾಧ್ಯವಿದ್ದರೆ ಪರಿಹಾರವನ್ನು ಕೇಳುವುದಿಲ್ಲವೆಂಬ ಪ್ರಸ್ತಾವನೆಯನ್ನು ಇಲ್ಲಿ ಅವರು ಪ್ರಸ್ತಾಪವನ್ನು ಮಾಡುತ್ತಿದ್ದಾರೆ.

ಈ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಚರ್ಚೆಯನ್ನು ಮಾಡುತ್ತೇನೆ. ಅದು ಸಾಧ್ಯವಾಗುವುದಾದರೆ ಆ ರೀತಿಯಾಗಿ ಅವರಿಗೆ 4 ಎಕರೆ ಜಮೀನಿನಲ್ಲಿ ಭೂಮಿಯನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆಂಬುದು ಒಂದು ಮಾತು. ಈ ಪ್ರಸ್ತಾವನೆಯೂ ಕೇಂದ್ರಸರ್ಕಾರದಲ್ಲಿರುವುದನ್ನು ಶೀಘ್ರದಲ್ಲಿ ಅದಕ್ಕೆ ಅನುಮೋದನೆಯೂ ದೊರೆಯುತ್ತದೆ ಎಂಬುದು, ಅದು ಎರಡನೆಯ ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ನಮ್ಮ ಮುಖ್ಯ ಅಭಿಯಂತರರು ಆ ಬಗ್ಗೆ ದೆಹಲಿಗೆ ಹೋಗಿ ಇದರ ಬಗ್ಗೆ ಶೀಘ್ರದಲ್ಲಿ ಅನುಮತಿಯೂ ಚುನಾವಣೆಯ ಹಿನ್ನೆಲೆಯಲ್ಲಿ ಬೇಗ ಸಿಗುತ್ತದೆ ಎಂಬ ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇದರ ಜೊತೆಗೆ ಎಂಎಂಎಲ್ ಬಗ್ಗೆ 10 ಕೋಟಿ ರೂಪಾಯಿಗಳನ್ನು ಅವರು ವ್ಯಯಮಾಡುವುದಕ್ಕೆ ತಯಾರಿದ್ದಾರೆನ್ನುವಂತಹ ಮಾತನ್ನು ಈಗ ತಾವು ನನ್ನೆದುರಿಗೆ ಪ್ರಸ್ತಾಪ ಮಾಡಿದ್ದೀರಿ. ನಾನು ಇಲಾಖಾಧಿಕಾರಿಗಳ ಜೊತೆ ಮತ್ತೊಮ್ಮೆ ಚರ್ಚೆ ಮಾಡಿ ಆ ಬಗ್ಗೆ ವ್ಯವಸ್ಥೆ ಮಾಡುತ್ತೇನೆ. ತಾವು ಗಮನಿಸಿರುವುದು ಏನೆಂದರೆ, ನಗರಸಭೆಯವರಿಗೆ ಸೂಚನೆಯನ್ನು ಕೊಟ್ಟಿರಬೇಕಾದಾಗ ಒಂದೇ ಕೆಲಸಕ್ಕೆ ಎರಡು ಕಡೆಗೆ ಹಣ ಪಾವತಿಯಾಗಬಹುದು, duplication ಆಗಬಹುದು ಎನ್ನುವಂತಹ ಅರ್ಥದಲ್ಲಿ ತಾವು ಮಾತನಾಡಿರುವುದನ್ನು ನನ್ನ ಗಮನಕ್ಕೆ ತಂದಿದ್ದೀರಿ. ಆ ರೀತಿಯಾಗದ ಹಾಗೆ ನೋಡಿಕೊಳ್ಳುವುದು, ಇದರ ಜೊತೆಗೆ 3 ಕೋಟಿ ರೂಪಾಯಿಗಳನ್ನು ಕೆಆರ್‌ಡಿಸಿಎಲ್‌ನಲ್ಲಿ ಹಣವಿದೆ ಎನ್ನುವಂತಹ ಮಾತನ್ನು ತಾವು ಹೇಳಿದ್ದೀರಿ. ಇದನ್ನು ಭೂಸ್ವಾಧೀನಕ್ಕಾಗಿ ಖರ್ಚುಮಾಡುವುದರ ಸಲುವಾಗಿಯೇ ಈ ಹಣವನ್ನು ಇಟ್ಟಿರುವುದು ಎಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅತೀ ಶೀಘ್ರದಲ್ಲಿಯೇ ಈ ರಸ್ತೆಯ ಅಗಲೀಕರಣ ಮಾಡುವಂತಹ ಕೆಲಸಕ್ಕೆ ಆದ್ಯತೆಯನ್ನು ಕೊಟ್ಟು ಕೆಲಸವನ್ನು ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ವಿಷಯ: ಶಾಸಕರ ಭವನದಲ್ಲಿ ಲೋಕಾಯುಕ್ತರು ರೈಡ್ ಮಾಡಿರುವ ಬಗ್ಗೆ

6.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶ್ರೀ ಮಲ್ಲಿಕಾರ್ಜುನ್ ಖರ್ಗೆ (ವಿರೋಧ ಪಕ್ಷದ ನಾಯಕರು):– ಸಭಾಧ್ಯಕ್ಷರೇ, ನಾನು ಒಂದು ನೋಟೀಸನ್ನು ಕೊಟ್ಟಿದ್ದೆ. ಅದು ಶಾಸಕರ ಭವನದಲ್ಲಿ ಲೋಕಾಯುಕ್ತರು ರೈಡ್ ಮಾಡಿ ಅದನ್ನು ಹಿಡಿದು ಕೇಸ್ ರಿಜಿಸ್ಟರ್ ಮಾಡಿದ್ದಾರೆ.

ಅಧ್ಯಕ್ಷರು:– ಶ್ರೀ ಜಯಚಂದ್ರರವರು ಬಂದಿದ್ದರು. ಈ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇವೆಂದು ಹೇಳಿದ್ದರು. ಆದರೆ ಶೂನ್ಯವೇಳೆಯಲ್ಲಿ ಈ ರೀತಿ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಬರುವುದಿಲ್ಲವೆಂದು ನನ್ನ ಅಭಿಪ್ರಾಯ.